ಸೆಂಟರ್‌ಗಳಲ್ಲಿ ಬಹಳಷ್ಟು ಅನೈತಿಕ ಚಟುವಟಿಕೆಗಳು ನಡೆಯುತ್ತವೆ, ಆದರೆ ನ್ಯಾನ್ಸಿಯ ಮಸಾಜ್ ಸೆಂಟರ್‌ನಲ್ಲಿ ಇದು ಸಾಧ್ಯವಿಲ್ಲ. ನನಗೆ ಅವಳ ಬಗ್ಗೆ ಇನ್ನಷ್ಟು ಗೌರವ ಮೂಡಿತು. ಕಾರ್ಯನಿಷ್ಠೆಯ ಬಗ್ಗೆ ಅವಳಿಗಿರುವ ಸಮರ್ಪಣಾ ಭಾವನೆಯನ್ನು ನಾನು ಪ್ರಶಂಸಿಸುತ್ತೇನೆ.

ನ್ಯಾನ್ಸಿಯ ಪ್ರಸವದ ಸಮಯದಲ್ಲಿ ಅವಳಿಗೆ ಪರ್ಯಾಯವಾಗಿ ಮಸಾಜ್ ಮಾಡುವವರ ಅಗತ್ಯವಿತ್ತು. ನಾನೇ ಎಲ್ಲಾ ವ್ಯವಸ್ಥೆಗಳನ್ನು ನೋಡಿಕೊಳ್ಳುತ್ತಿದ್ದೆ. ಆದರೆ ನನಗೆ ಮಸಾಜ್ ಮಾಡಲು ಬರುತ್ತಿರಲಿಲ್ಲ. ಅದೃಷ್ಟದಿಂದ ಅವಳ ಫೇಸ್‌ಬುಕ್‌ನಲ್ಲಿಯೇ ಜಾಹೀರಾತನ್ನು ನೋಡಿದಾಗ ಕೋಪನ್‌ಹೇಗನ್ನಿನಲ್ಲಿ ವಾಸಿಸುತ್ತಿದ್ದ ಓರ್ವ ಇಂಡಿಯನ್ ಯುವತಿ ಸಿಕ್ಕಳು. ಅವಳು ಮಸಾಜನ್ನು ಕಲಿತಿದ್ದಳು ಹಾಗೂ ಮುಂಬೈಯಲ್ಲಿ ಬ್ಯೂಟಿ ಮತ್ತು ಮಸಾಜ್ ಸೆಂಟರ್‌ನಲ್ಲಿ ಕೆಲಸ ಮಾಡಿದ್ದಳು. ಅವಳ ಹೆಸರು ಅಂಜೂ. ನಾವು ಅಂಜುವನ್ನು ಮಸಾಜ್ ಕೆಲಸಕ್ಕೆ ನೇಮಿಸಿಕೊಂಡೆವು.

ಇಷ್ಟು ದೊಡ್ಡ ವಯಸ್ಸಿನಲ್ಲಿ ನಾವು ತಂದೆ–ತಾಯಿಯಾಗುತ್ತಿದ್ದೆವು. ನಾವು ಹೆದರಿದ್ದೆವು. ಗರ್ಭಾವಸ್ಥೆಯ ಮೂರನೆಯ ತಿಂಗಳಿನಲ್ಲಿ ಏನಾದರೂ ವಿಕಾರತೆ ಇದೆಯೇ ಎಂದು ತಿಳಿಯಲು ಭ್ರೂಣದ ಜೆನೆಟಿಕ್ ಟೆಸ್ಟ್ ಮಾಡಿಸಿದೆವು. 'ಎಲ್ಲವೂ ಸರಿಯಿದೆ ಎಂದು ಕಾಣಬರುತ್ತಿದೆ, ಮಗು ಗಂಡು' ಎಂದು ಟೆಸ್ಟ್ ಪರಿಣಾಮವನ್ನು ವೈದ್ಯರು ನ್ಯಾನ್ಸಿಗೆ ಫೋನ್ ಮೂಲಕ ತಿಳಿಸಿದರು.

ನ್ಯಾನ್ಸಿ ತಕ್ಷಣ ತನ್ನ ಪಾರ್ಲರ್ ಅನ್ನು ಮುಚ್ಚಿ ಒಂದು ಬೇಬಿ ಶಾಪ್‌ಗೆ ಹೋದಳು. ಸ್ಲೇಟ್ ಬಣ್ಣದ ಒಂದು ಶಿಶು ಉಡುಪನ್ನು ಖರೀದಿಸಿ ನನಗೆ ವಾಟ್ಸಾಪ್ ಮಾಡಿದಳು. ಡ್ರೆಸ್ ಮೇಲೆ 'ಐ ಯಾಮ್ ಯಾಸ್ ಹ್ಯಾಂಡ್ಸಮ್ ಯಾಸ್ ಮೈ ಡ್ಯಾಡ್' ಎಂದು ಬರೆಯಲಾಗಿತ್ತು. ಶಾಲೆಯಲ್ಲಿ ಈ ಮೆಸೇಜ್ ಓದಿದ ನಾನು ಒಂದು ಮಧುರ ಮತ್ತು ಕೋಮಲ ಸ್ಪರ್ಶವನ್ನು ಅನುಭವಿಸಿದೆ. ನಾನು ಆ ಚಿತ್ರವನ್ನು ಚುಂಬಿಸಿದೆ.

***

ಮಗು ಸರ್ಜರಿಯಿಂದ ಹುಟ್ಟಿತು. ನರ್ಸ್ ಆಪರೇಶನ್ ರೂಮಿನಿಂದ ಹೊರ ಬಂದು ಮಗುವನ್ನು ನನ್ನ ಕೈಗೆ ಹಾಕಿದಾಗ, ನನ್ನ ಕಾತರದ ದೃಷ್ಟಿ ನನ್ನ ಮಗುವಿನ ಮೇಲೆ ಬಿತ್ತು. ನನ್ನ ಮನಸ್ಸು ಅತೀವ ಸಂತಸದಿಂದ ಬೀಗಿತು. ಅನಾಯಾಸವಾಗಿ ನೀನಾ ನೆನಪಾದಳು. ನಮಗೊಂದು ಮಗುವಾಗಬೇಕೆಂದು ನಾವಿಬ್ಬರು ಅದೆಷ್ಟು ಪ್ರಯತ್ನವನ್ನು ಮಾಡಿದ್ದೆವು! ಅವಳು ಇಹಲೋಕವನ್ನೇ ತ್ಯಜಿಸಿದಳು. ಆದರೆ ದೇವರು ನನ್ನಿಚ್ಛೆಯನ್ನು ಈಡೇರಿಸಿದ. ಜೀವನ ನನ್ನಿಂದ ಬಹಳಷ್ಟನ್ನು ಕಸಿಯಿತು. ಆದರೆ ಕೊಡುಗೆಯಲ್ಲೂ ಜಿಪುಣತನವನ್ನು ತೋರಲಿಲ್ಲ. ನನ್ನೆರಡೂ ಕೈಗಳನ್ನು ಜೋಡಿಸಿ ಆ ದೇವರಿಗೆ ಧನ್ಯವಾದವನ್ನು ಹೇಳಿದೆ.

ಮಗುವಿಗೆ ಒಂದೂವರೆ ತಿಂಗಳಾದಾಗ, ನ್ಯಾನ್ಸಿ ಮತ್ತೆ ಪಾರ್ಲರ್‌ಗೆ ಹೋದಳು. ಅವಳು ಅಂಜುವನ್ನು ಕೆಲಸದಿಂದ ತೆಗೆಯದೆ, ಇನ್ನಿಬ್ಬರು ಹುಡುಗಿಯರನ್ನು ಕೆಲಸಕ್ಕೆ ನೇಮಿಸಿಕೊಂಡಳು. ಸಾಕಷ್ಟು ಗ್ರಾಹಕರು ಬರಲಾರಂಭಿಸಿದ್ದಾರೆ. ಇಪ್ಪತ್ತರಿಂದ ಹಿಡಿದು ಎಂಬತ್ತರ ವಯಸ್ಸಿನವರು ಒತ್ತಡದಿಂದ ಮುಕ್ತಿ ಪಡೆಯಲು ಬರುತ್ತಿದ್ದರು. ಎಲ್ಲರೂ ಮಸಾಜ್ ಮಾಡಿಸಲು ನಮಗೆ ನ್ಯಾನ್ಸಿ ಬೇಕು ಎಂದು ಬೇಡಿಕೆಯಿಡುತ್ತಾರೆ.

ನ್ಯಾನ್ಸಿಯ ಮಗಳು, ಅಂದರೆ 'ನ್ಯಾನ್ಸಿ ಮಸಾಜ್ ಪಾರ್ಲರ್' ಜನಪ್ರಿಯತೆಯನ್ನು ಪಡೆಯುತ್ತಿದೆ. 'ನನಗೆ ನಾಲ್ವರು ಮಕ್ಕಳಿದ್ದಾರೆ, ಮೂರು ಜನ ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣುಮಗಳು' ಎನ್ನುತ್ತಾಳೆ ನ್ಯಾನ್ಸಿ. ನ್ಯಾನ್ಸಿ ಮಸಾಜ್ ಪಾರ್ಲರ್ ಅವಳ ಮಗಳು.

ಅವಳು ಹಳೆಯ ಜಾಗವನ್ನು ಬಿಟ್ಟು, ವಿಶಾಲವಾದ ಹೊಸ ಜಾಗವನ್ನು ತೆಗೆದುಕೊಂಡಳು. ಮಸಾಜ್ ಒಂದು ಹಳ್ಳಿ ಶಬ್ದವೆಂದು ಅನ್ನಿಸುತ್ತದೆ, ಮಸಾಜ್ ಸೆಂಟರ್ ಸಹ ಹಳೆಯ ಶಬ್ದವಾಗಿದೆ. ಹೀಗಾಗಿ ಅವಳು ತನ್ನ ಮಸಾಜ್ ಸೆಂಟರ್ ಅನ್ನು 'ನ್ಯಾನ್ಸಿ ಆಯುರ್ವೇದಿಕ್ ಹೀಲಿಂಗ್ ರೆಸಾರ್ಟ್' ಎನ್ನುತ್ತಿದ್ದಾಳೆ. ಇಲ್ಲಿ ಬಾಡಿ–ಸ್ಪಾ, ಹೆಡ್ ಮಸಾಜ್, ಫುಟ್ ಮಸಾಜ್, ಫುಲ್ ಬಾಡಿ ಮಸಾಜ್, ಅರೋಮಾ ಥೆರಪಿ ಎಲ್ಲಾ ವಿಧದ ಮಸಾಜ್‌ಗಳಿವೆ. ಮಸಾಜ್ ಸೆಂಟರನ್ನು, ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕ ಭಾಗವಾಗಿ ವಿಂಗಡಿಸಲಾಗಿದೆ.

ಹೊಸ ಉದ್ಯೋಗ ಚಾಲೆಂಜ್ ಆಗಿದೆ. ಕ್ಲೈಂಟ್‌ನ ಅವಶ್ಯಕತೆ ಮತ್ತು ಅವರ ಸಂಖ್ಯೆಗೆ ಅನುಗುಣವಾಗಿ ದೀರ್ಘ ಸಮಯದವರೆಗೆ ಕೆಲಸ ಮಾಡಬೇಕಾಗುತ್ತದೆ. ಅನೇಕ ಬಾರಿ ವಾರದ ರಜಾ ದಿನಗಳಲ್ಲಿ ಮತ್ತು ಸಂಜೆಯ ವೇಳೆಯಲ್ಲೂ ಕೆಲಸ ಮಾಡಬೇಕಾಗುತ್ತದೆ. ಅವಳು ಕ್ಲೈಂಟ್‌ನ ಮನೆಗೆ ಹೋಗಿ ಅಥವಾ ಅವರು ಕೆಲಸ ಮಾಡುವ ಸ್ಥಳಗಳಿಗೂ ಹೋಗಿ ತನ್ನ ಸೇವೆಯನ್ನು ಕೊಡುತ್ತಾಳೆ. ಕ್ಲೈಂಟ್‌ನ ಶಾರೀರಿಕ ಲಕ್ಷಣಗಳು ಮತ್ತು ಉಪಚಾರದ ಪರಿಣಾಮಗಳನ್ನು ನೋಡಿ, ತನ್ನ ಮಸಾಜಿನ ಮೆಥೆಡ್‌ಗಳಲ್ಲಿ ಬದಲಾವಣೆಯನ್ನು ಮಾಡಿಕೊಳ್ಳುತ್ತಾಳೆ. ಮಸಾಜಿನ ಅನೇಕ ವಿಧಾನಗಳನ್ನು ಅಳವಡಿಸಿಕೊಳ್ಳುತ್ತಾಳೆ. ಉಪಚಾರದ ನಂತರ ತನ್ನ ಕ್ಲೈಂಟ್‌ಗೆ ಅವರ ದಿನಚರಿ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಅಗತ್ಯ ಸಲಹೆಗಳನ್ನೂ ಕೊಡುತ್ತಾಳೆ. ಕ್ಲೈಂಟ್‌ಗಳ ಆರೋಗ್ಯ ಮತ್ತು ಉಪಚಾರಗಳಿಗೆ ಸಂಬಂಧಿಸಿದ ವಿಸ್ತೃತ ರೆಕಾರ್ಡ್‌ಗಳನ್ನೂ ಫೈಲ್ ಮಾಡುತ್ತಾಳೆ. ಈ ರೆಕಾರ್ಡ್‌ಗಳು ಅವಶ್ಯಕತೆಯುಂಟಾದಾಗ ಕ್ಲೈಂಟ್ಸ್‌ಗಳ ವೈದ್ಯರು ಅಥವಾ ಫಿಸಿಯೊಥೆರೆಪಿಸ್ಟ್‌ಗಳ ಸಹಾಯಕ್ಕೆ ಬರುತ್ತವೆ.

ಗ್ರಾಹಕರ ಮಿತಿಗಳನ್ನೂ ನಿರ್ಧರಿಸಬೇಕಾಗುತ್ತದೆ. ಒಮ್ಮೊಮ್ಮೆ ಗ್ರಾಹಕರು ಅವಳೊಂದಿಗೆ ಅನುಚಿತ ಆಗ್ರಹವನ್ನು ಮಾಡುತ್ತಾರೆ. ಅವಳ ಅನುಭವ ಅವಳಿಗೆ ಸಾಕಷ್ಟು ಜಾಗೃತಗೊಳಿಸಿದೆ. ಅವಳು ತನ್ನ ಗ್ಯಾರಂಟಿಯನ್ನು ಹೊರಬಲ್ಲಳು, ಆದರೆ ಗ್ರಾಹಕರ ಗ್ಯಾರಂಟಿಯನ್ನು ಹೊರಲಾರಳು. ಅವಳಿಗೆ ಇದನ್ನು ನಿರ್ವಹಿಸುವುದು ತಿಳಿದಿದೆ. ಅವಳು ರೇಗುವುದಕ್ಕೆ ಪ್ರತಿಯಾಗಿ ಅವರಿಗೆ ತಿಳುವಳಿಕೆ ಹೇಳುತ್ತಾಳೆ. ತನ್ನ ಗ್ರಾಹಕರಿಂದ ತನ್ನ ಸೇವೆಯನ್ನು ಇನ್ನಷ್ಟು


## ಹೊಸ ಧಾರಾವಾಹಿ




ನೂರು ವರ್ಷಗಳ ಹಿಂದೆ ಮಲೆನಾಡು ಹೇಗಿತ್ತು? ಅಲ್ಲಿನ ಜನಜೀವನ ಹೇಗಿತ್ತು? ಇದೋ 'ಅಂತಃಪುರ'ಕ್ಕೆ ಸ್ವಾಗತ. 'ಸುಧಾ' ಬಳಗದ ಹಿರಿಯ ಬರಹಗಾರರಲ್ಲೊಬ್ಬರಾದ **ವಸುಮತಿ ಉಡುಪ**, ಮುಂದಿನ ವಾರದಿಂದ ಓದುಗರನ್ನು 'ಅಂತಃಪುರ'ಕ್ಕೆ ಸ್ವಾಗತಿಸುತ್ತಿದ್ದಾರೆ. ಇದು ಮಲೆನಾಡಿನ ಕಥನವೂ ಹೌದು, ಮಲೆನಾಡಿನ ಹೆಣ್ಣುಮಕ್ಕಳ ಕಥನ ಕೌತುಕವೂ ಹೌದು. ಮಲೆನಾಡಿನ ಸೊಬಗು–ಸೌಂದರ್ಯದೊಂದಿಗೆ, ಅಲ್ಲಿನ ಪರಿಸರದ ಭಾಷೆಯೊಂದಿಗೆ, ಸ್ತ್ರೀಲೋಕದ ತವಕ ತಲ್ಲಣಗಳನ್ನೂ ಕಟ್ಟಿಕೊಡುವ ವಿಶಿಷ್ಟ ಪ್ರಯತ್ನ 'ಅಂತಃಪುರ'. ಪಕ್ವ ಮನಸ್ಸಿನ ನಿರೂಪಣೆಯ, 'ಹೀಗೂ ಇತ್ತೇ?' ಎಂದು ಓದುಗರಲ್ಲಿ ಬೆರಗು–ವಿಷಾದ ಹುಟ್ಟಿಸಬಲ್ಲ ಚಿತ್ರಕಶಕ್ತಿಯ 'ಅಂತಃಪುರ' ಕಥನ.

**ಮುಂದಿನ ವಾರದಿಂದ ಆರಂಭ**